## ಟೂಂಟಾಸ್ಟಿಕ್ 3ಡಿ ಆ್ಯಪ್

ಗೂಗಲ್‌ನ ಈ ಕಥೆ ಹೇಳುವ ಆ್ಯಪ್ ಮೂಲಕ ಮಕ್ಕಳು 3ಡಿನಲ್ಲಿ ಕಾರ್ಟೂನ್ ಸೃಷ್ಟಿಸಬಹುದು. ಆ ಮೂಲಕ ತಾವೇ ಕಥೆಗಳನ್ನು ಹೆಣೆಯಬಹುದು. ಸ್ಕ್ರೀನ್ ಸುತ್ತ ಈ ಕಾರ್ಟೂನ್ ಪಾತ್ರಗಳನ್ನು ಚಲಿಸುತ್ತ ಕಥೆ ಹೇಳಬಹುದು. ಇದು ಒಂದು ರೀತಿ ಡಿಜಿಟಲ್ ತೊಗಲು ಬೊಂಬೆ ಶೋ ಎನ್ನಬಹುದು. ಹಿನ್ನಲೆಯನ್ನೂ ಆಯ್ಕೆ ಮಾಡಿ ಆ್ಯಪ್‌ನ ಎಡಿಟರ್ ಹಾಗೂ ಕ್ಯಾಮೆರಾ ಸೌಲಭ್ಯಗಳನ್ನು ಬಳಸಿಕೊಂಡು ಅತ್ಯುತ್ತಮ ಶೋ ಸೃಷ್ಟಿಸಬಹುದು. ಈ 3ಡಿ ಜಗತ್ತಿನಲ್ಲಿ ನೂರಾರು ಪಾತ್ರಗಳು, ಚಿತ್ರ ಬಿಡಿಸುವ ಸಲಕರಣೆಗಳು, ಮಾದರಿ ಕಥೆಗಳಿರುವಾಗ ಮಕ್ಕಳು ಸೃಜನಶೀಲತೆಯನ್ನು ಬೆಳೆಸಿಕೊಳ್ಳಬಹುದು. ಇದು ಗೂಗಲ್ ಪ್ಲೇ ಸ್ಟೋರ್ ಹಾಗೂ ಐಒಎಸ್ ಆ್ಯಪ್ ಸ್ಟೋರ್‌ನಲ್ಲಿ ಲಭ್ಯ.




## ಗೂಗಲ್ ವ್ಯಾಲೆಟ್

ಇಬ್ಬರ ಮಧ್ಯೆ ಪರಸ್ಪರ ಮೊಬೈಲ್ ಪಾವತಿಗೆ ಹೇಳಿ ಮಾಡಿಸಿದಂತಹ ಸುಧಾರಿತ ಆ್ಯಪ್. ಮೇಲ್ನೈ ಸ್ಪಷ್ಟವಾಗಿದ್ದು, ಕಾರ್ಡ್ ಆಯ್ಕೆಯೂ ಇದೆ. ಹಣವನ್ನು ಟೆಕ್ಸ್ಟ್ ಮೆಸೇಜ್ ಮೂಲಕ ಕಳಿಸಬಹುದು. ಡೆಬಿಟ್ ಹಾಗೂ ಕ್ರೆಡಿಟ್ ಕಾರ್ಡುಗಳ ಸಂಪರ್ಕ ಹೊಂದಿದ ಕೇಂದ್ರೀಕೃತ ವ್ಯವಸ್ಥೆಯಿರುವ ಈ ಗೂಗಲ್ ವ್ಯಾಲೆಟ್ ಆರಂಭವಾದಾಗ ಕಾರ್ಡ್‌ಗಳನ್ನು ಬ್ಯಾಂಕ್ ಖಾತೆಗೆ ಸಂಪರ್ಕಿಸಿ ಪ್ಲಾಸ್ಟಿಕ್ ಕಾರ್ಡುಗಳ ಬಳಕೆಯನ್ನು ಕಡಿಮೆ ಮಾಡಿತ್ತು. ವೆಬ್ ಬ್ರೌಸರ್ ಹಾಗೂ ಮೊಬೈಲ್ ಆ್ಯಪ್ ಮೂಲಕ ದೊರೆಯುತ್ತಿರುವ ಈ ವ್ಯವಸ್ಥೆ ಬ್ಯುಸಿನೆಸ್ ವಹಿವಾಟಿಗಿಂತ ಇಬ್ಬರು ವ್ಯಕ್ತಿಗಳ ಮಧ್ಯೆ ಹಣದ ವಿನಿಮಯಕ್ಕೆ ಹೆಚ್ಚು ಒತ್ತು ನೀಡಲು ಸುಧಾರಣೆಗಳನ್ನು ತಂದಿದೆ. ನಿಮ್ಮ ವ್ಯಾಲೆಟ್ ಖಾತೆಯನ್ನು ಬ್ಯಾಂಕ್ ಖಾತೆ ಅಥವಾ ಕಾರ್ಡ್‌ಗಳಿಗೆ ಸಂಪರ್ಕಿಸಿ ಅಲ್ಲಿಂದ ಹಣ ವರ್ಗಾಯಿಸಿಕೊಳ್ಳಬೇಕು. ಆದರೆ ಸೇವಾ ಶುಲ್ಕ ಶೇ. 2.9ರಷ್ಟಿದೆ.

## ಕ್ಯಾಚಪ್ ಮ್ಯಾಥ್

ಇದು ವಿದ್ಯಾರ್ಥಿಗಳಿಗೆ ಅತ್ಯಂತ ಉಪಯುಕ್ತ ಆ್ಯಪ್. ಅಂಕಗಣಿತ, ರೇಖಾಗಣಿತ ಮತ್ತು ಬೀಜಗಣಿತ ಸುಧಾರಣೆಗೆ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಾಗುತ್ತಿರುವ ವಿದ್ಯಾರ್ಥಿಗಳು ಇದರ ಪ್ರಯೋಜನ ಪಡೆಯಬಹುದು. ಗಣಿತ ಎಂಬುದು ಕಬ್ಬಿಣದ ಕಡಲೆ, ಕೆಂಡದ ಮೇಲೆ ನಡೆದಂತೆ ಎಂದೆಲ್ಲ ಹೆದರುವ ವಿದ್ಯಾರ್ಥಿಗಳು ಈ ವಿಷಯವನ್ನು ಅರ್ಥ ಮಾಡಿಕೊಳ್ಳಲು ಬಹಳಷ್ಟು ಸಮಯ ತೆಗೆದುಕೊಳ್ಳುತ್ತಾರೆ. ಅಂಥವರು ಐಫೋನ್, ಐಪ್ಯಾಡ್ ಹಾಗೂ ಐಪಾಡ್ ಆ್ಯಪ್ ಆಗಿರುವ ಇದನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಇದು ತಮಾಷೆಯ ಮೂಲಕ ಗಣಿತ ಕಲಿಸುತ್ತದೆ. ಸರ್ಚ್ ಬಾರ್‌ನಲ್ಲಿ ಕ್ಷಣದಲ್ಲೇ ನಿಮಗೆ ಬೇಕಾದ ವಿಷಯವನ್ನು ಹುಡುಕಾಡಬಹುದು. ಪ್ರಾಯೋಗಿಕ ಪಾಠಗಳು, ವಿಡಿಯೋ ಮೂಲಕ ಸಮಸ್ಯೆಗಳನ್ನು ಪರಿಹರಿಸುತ್ತದೆ.




## ಮ್ಯೂಸಿಕ್ ಮೆಮೋಸ್

ಹಿನ್ನೆಲೆ ಸಂಗೀತವಿರುವ ಈ ಐಒಎಸ್ ಆ್ಯಪ್ ಸಂಗೀತಗಾರರ ಸೃಜನಶೀಲತೆಗೆ ಇಂಬು ನೀಡುತ್ತದೆ. ಬಿಲ್ಟ್ ಇನ್ ವೈಸ್ ರೆಕಾರ್ಡರ್ ಇದ್ದು, ಗಿಟಾರ್, ಪಿಯಾನೊ, ಆಲಾಪ.. ಹೀಗೆ ಯಾವುದಾದರೂ ಹೊಸ ರೀತಿಯ ಸಂಗೀತವಿದ್ದರೆ ಅದನ್ನು ರೆಕಾರ್ಡ್ ಮಾಡಿಕೊಂಡು ಭವಿಷ್ಯದಲ್ಲಿ ಅದರ ಆಧಾರದ ಮೇಲೆ ನಿಮ್ಮದೇ ಸಂಗೀತವನ್ನು ಸೃಷ್ಟಿಸಬಹುದು. ಸ್ಕ್ರೀನ್ ಮಧ್ಯೆ ರೆಕಾರ್ಡ್ ಬಟನ್ ಕಾಣಿಸುತ್ತದೆ. ಅದರ ಮೇಲೆ ಕುಟ್ಟಿದರೆ ಧ್ವನಿ ಮುದ್ರಣ ಆರಂಭವಾಗುತ್ತದೆ. ಮುಖ್ಯವಾಗಿ ಗಿಟಾರ್ ಮತ್ತು ಪಿಯಾನೊ ಸಂಗೀತವಿದ್ದು, ಇತರ ಕೆಲವು ವಾದ್ಯಗಳ ಧ್ವನಿ ಅಷ್ಟೊಂದು ಇಂಪಾಗಿಲ್ಲ. ಮ್ಯೂಸಿಕ್ ಮೆಮೋಸ್ ಆಡಿಯೋ ಇನ್‌ಪುಟ್ ಅನ್ನು ತಪಾಸಣೆ ಮಾಡಿ ನಿಮ್ಮ ಸಂಗೀತವನ್ನು ಬಾರ್‌ಕೋಡ್‌ಗೆ ವರ್ಗಾಯಿಸುತ್ತದೆ.



■ ಎಸ್. ತುಂಬೆ